# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

www.souharda.coop, Ph: 080-23378375-80,E-mail: souharda@souharda.coop


## ನೇರ ನೇಮಕಾತಿ ಲಿಖಿತ ಪರೀಕ್ಷೆಯ ಬಗ್ಗೆ ಸೂಚನೆಗಳು

1. **ಲಿಖಿತ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳು :** ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಹಾಗೂ ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಪ್ರಕಟಿಸಲಾಗಿದ್ದು ಗಮನಿಸಲು ಕೋರಿದೆ. ಅರ್ಹ ಅಭ್ಯರ್ಥಿಗಳು ಮಾತ್ರ ಲಿಖಿತ ಪರೀಕ್ಷೆಗೆ ಹಾಜರಾಗಲು ತಿಳಿಸಿದೆ.

2. **ಅನರ್ಹ ಅಭ್ಯರ್ಥಿಗಳ ಗಮನಕ್ಕೆ :** ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಅರ್ಜಿ ತಿರಸ್ಕೃತ ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು, ತಿರಸ್ಕರಿಸಲು/ಅನರ್ಹತೆಯ ಕಾರಣಗಳ ಸಮೇತ ಪ್ರಕಟಿಸಲಾಗಿದೆ. ಅರ್ಜಿ ತಿರಸ್ಕೃತ ಅನರ್ಹ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಅಂದರೆ ಲಿಖಿತ ಪರೀಕ್ಷೆ/ಕೌಶಲ್ಯ ಪರೀಕ್ಷೆ/ಸಂದರ್ಶನದಲ್ಲಿ ಭಾಗವಹಿಸಲು ಅವಕಾಶವಿಲ್ಲ.

3. **ಲಿಖಿತ ಪರೀಕ್ಷೆ ದಿನಾಂಕ : 26.09.2021, ಭಾನುವಾರ.**

4. **ಲಿಖಿತ ಪರೀಕ್ಷಾ ಕೇಂದ್ರ :** ಕೆ.ಎಲ್.ಇ. ಸೊಸೈಟಿ ನಿಜಲಿಂಗಪ್ಪ ಕಾಲೇಜು, #1040, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560 010

5. **ಲಿಖಿತ ಪರೀಕ್ಷಾ ಸಮಯ :**

   1) ಉಪಸಿಬ್ಬಂದಿ, ಉಪಸಿಬ್ಬಂದಿ ಕಮ್ ವಾಹನ ಚಾಲಕ, ಸ್ವಚ್ಛತಾ ಸಿಬ್ಬಂದಿ (ಸ್ವೀಪರ್) ಹುದ್ದೆಗಳಿಗೆ ಏಕರೂಪದ ಪ್ರಶ್ನೆ ಪತ್ರಿಕೆ ಇರಲಿದ್ದು, ಈ ಹುದ್ದೆಗಳಿಗೆ **ಬೆಳಿಗ್ಗೆ 10.30 ರಿಂದ 11.30 (60 ನಿಮಿಷಗಳು)** ಗಂಟೆಯವರೆಗೆ ಲಿಖಿತ ಪರೀಕ್ಷೆ ನಡೆಯಲಿದೆ.

   2) ಸಿವಿಲ್ ಇಂಜಿನಿಯರ್ ಮತ್ತು ಸಹಾಯಕ ಹುದ್ದೆಗಳಿಗೆ ಏಕರೂಪದ ಪ್ರಶ್ನೆ ಪತ್ರಿಕೆ ಇರಲಿದ್ದು, ಈ ಹುದ್ದೆಗಳಿಗೆ **ಮಧ್ಯಾಹ್ನ 12.00 ರಿಂದ 01.30 ಗಂಟೆಯವರೆಗೆ (90 ನಿಮಿಷಗಳು)** ಲಿಖಿತ ಪರೀಕ್ಷೆ ನಡೆಯಲಿದೆ.

6. **ಲಿಖಿತ ಪರೀಕ್ಷೆ ಪ್ರವೇಶ ಪತ್ರ :** ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷಾ ಪ್ರವೇಶ ಪತ್ರವನ್ನು ಅರ್ಜಿಯಲ್ಲಿ ನಮೂದಿಸಿರುವ ಮೇಲ್ ಐಡಿಗೆ ಇ ಮೇಲ್ ಮೂಲಕ ಕಳುಹಿಸಲಾಗಿದ್ದು, ಸದರಿ ಪ್ರವೇಶ ಪತ್ರವನ್ನು ಮುದ್ರಿಸಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ, ಸಹಿ ಮಾಡಿ ಲಿಖಿತ ಪರೀಕ್ಷೆಯ ಸಮಯದಲ್ಲಿ ಹಾಜರುಪಡಿಸಬೇಕು.

7. **ಲಿಖಿತ ಪರೀಕ್ಷಾ ಪಠ್ಯಕ್ರಮ :** ಲಿಖಿತ ಪರೀಕ್ಷೆಯು ಒಂದು ಪತ್ರಿಕೆಯನ್ನು ಮಾತ್ರ ಹೊಂದಿರುತ್ತದೆ. ಇವು ಬಹು ಆಯ್ಕೆ ಮಾದರಿ ಮತ್ತು ವಿವರಣಾತ್ಮಕ ಪ್ರಶ್ನೆ ಪತ್ರಿಕೆಗಳಾಗಿದ್ದು ಈ ಕೆಳಕಂಡ ಅಂಕಗಳನ್ನು ಒಳಗೊಂಡಿರುತ್ತದೆ.

| ಕ್ರ.ಸಂ. | ಹುದ್ದೆ | ವಿಷಯ | ಪ್ರಶ್ನೆಗಳ ಸಂಖ್ಯೆ | ಅಂಕಗಳು | ಒಟ್ಟು |
|---|---|---|---|---|---|
| 1 | ಸಿವಿಲ್ ಇಂಜಿನಿಯರ್ & ಸಹಾಯಕ ಹುದ್ದೆ | ಸಹಕಾರ | 30 | 30 | (90+10) 100 |
| | | ಭಾಷ ಜ್ಞಾನ (ಕನ್ನಡ & ಇಂಗ್ಲೀಷ್) | 25 | 25 | |
| | | ಸಾಮಾನ್ಯ ಜ್ಞಾನ (GK) | 25 | 25 | |
| | | ಹಣಕಾಸು & ಬ್ಯಾಂಕಿಂಗ್ | 10 | 10 | |
| | | ಐದು ಅಂಕಗಳ ವಿವರಣಾತ್ಮಕ ಪ್ರಶ್ನೆ ಯಾವುದಾದರು 2ಕ್ಕೆ ಮಾತ್ರ ಉತ್ತರಿಸುವಂತೆ | 5 ಪ್ರಶ್ನೆ | 10 | |
| 2 | ಉಪಸಿಬ್ಬಂದಿ, ಉಪಸಿಬ್ಬಂದಿ ಕಮ್ ವಾಹನ ಚಾಲಕ, ಸ್ವೀಪರ್ | ಕನ್ನಡ ಭಾಷ ಜ್ಞಾನ | 15 | 15 | (45+5) 50 |
| | | ಸಹಕಾರ | 15 | 15 | |
| | | ಸಾಮಾನ್ಯ ಜ್ಞಾನ | 15 | 15 | |
| | | ಐದು ಅಂಕಗಳ ವಿವರಣಾತ್ಮಕ ಪ್ರಶ್ನೆ ಯಾವುದೇ 1ಕ್ಕೆ ಮಾತ್ರ ಉತ್ತರಿಸುವಂತೆ | 3 ಪ್ರಶ್ನೆ | 5 | |

8. **ಅಭ್ಯರ್ಥಿಗಳಿಗೆ ಸೂಚನೆಗಳು :**

1) ಅರ್ಹ ಅಭ್ಯರ್ಥಿಗಳು ತಮ್ಮ ಫೋಟೋ ಐಡಿ (ಚುನಾವಣಾ ಗುರುತಿನ ಪತ್ರ ಅಥವಾ ಡ್ರೈವಿಂಗ್ ಲೈಸೆನ್ಸ್ ಅಥವಾ ಪ್ಯಾನ್ ಕಾರ್ಡ್ ಅಥವಾ ಆಧಾರ್ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದು) ಒರಿಜಿನಲ್ ಮತ್ತು ಒಂದು ಜೆರಾಕ್ಸ್ ಪ್ರತಿಯನ್ನು, ಸಂಯುಕ್ತ ಸಹಕಾರಿಯು ನೀಡುವ ಪರೀಕ್ಷಾ ಪ್ರವೇಶ ಪತ್ರದೊಂದಿಗೆ ಲಿಖಿತ ಪರೀಕ್ಷೆಯ ಸಮಯದಲ್ಲಿ ಹಾಜರುಪಡಿಸುವುದು.

2) ಪರೀಕ್ಷಾ ಪ್ರವೇಶ ಪತ್ರ ಹಾಗೂ ಫೋಟೋ ಐಡಿಯ ಜೆರಾಕ್ಸ್ ಪ್ರತಿಯನ್ನು ಪರೀಕ್ಷಾ ಕೇಂದ್ರದ ಮೇಲ್ವಿಚಾರಕರಿಗೆ ಪರಿಶೀಲನೆಗಾಗಿ ಪರೀಕ್ಷಾ ಸಮಯದಲ್ಲಿ ಹಾಜರು ಪಡಿಸತಕ್ಕದ್ದು.

3) ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ಅಭ್ಯರ್ಥಿಗಳು ಹಾಜರಿರಬೇಕು.

4) ಪರೀಕ್ಷಾ ಆರಂಭವಾಗಿ 15 ನಿಮಿಷಗಳ ನಂತರ ಆಗಮಿಸುವ ಅಭ್ಯರ್ಥಿಗೆ ಲಿಖಿತ ಪರೀಕ್ಷೆಗೆ ಪ್ರವೇಶ ನಿರಾಕರಿಸಲಾಗುವುದು.

5) ಲಿಖಿತ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಯು, ಪರೀಕ್ಷೆ ಆರಂಭವಾಗಿ 30 ನಿಮಿಷಗಳವರೆಗೆ ಪರೀಕ್ಷಾ ಕೊಠಡಿಯಿಂದ ಹೊರಹೋಗುವಂತಿಲ್ಲ.

6) ಪರೀಕ್ಷಾ ಕೊಠಡಿಗೆ ಪುಸ್ತಕಗಳನ್ನು, ನೋಟ್ ಬುಕ್, ಮೊಬೈಲ್, ಲ್ಯಾಪ್‌ಟಾಪ್, ಕ್ಯಾಲ್ಕುಲೇಟರ್ ಇತ್ಯಾದಿಗಳನ್ನು ತರುವಂತಿಲ್ಲ ಹಾಗೂ ಇವುಗಳ ಬಳಕೆಯನ್ನು ಪರೀಕ್ಷೆಯಲ್ಲಿ ಅನುಮತಿಸಲಾಗುವುದಿಲ್ಲ.

7) ಲಿಖಿತ ಪರೀಕ್ಷೆಗೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಸಂಯುಕ್ತ ಸಹಕಾರಿಯಿಂದ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.

8) ಯಾವುದೇ ಅಭ್ಯರ್ಥಿಯು ಇತರ ಅಭ್ಯರ್ಥಿಗೆ ಪರೀಕ್ಷಾ ಸಮಯದಲ್ಲಿ ಸಹಾಯ ಮಾಡುವುದು, ತೊಂದರೆ ಉಂಟು ಮಾಡುವುದು, ನಕಲು ಮಾಡಲು ಪ್ರಯತ್ನಿಸುವುದು, ನಕಲು ಮಾಡಲು ಅವಕಾಶ ಒದಗಿಸುವುದು ಸೇರಿದಂತೆ ಯಾವುದೇ ದುರ್ವರ್ತನೆಯಲ್ಲಿ ತೊಡಗಿದಲ್ಲಿ ಅಂತಹ ಅಭ್ಯರ್ಥಿಯನ್ನು ಪರೀಕ್ಷಾ ಕೊಠಡಿಯಿಂದ ಹೊರಕಳಿಸಲಾಗುವುದು ಹಾಗೂ ಪರೀಕ್ಷಾ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕ
ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ
ನೇಮಕಾತಿ ಸಮಿತಿ

ದಿನಾಂಕ : 14.09.2021
ಸ್ಥಳ : ಬೆಂಗಳೂರು.